**ಗಾಂಧಿಯ ಊರು ರಾಜ್‌ಕೋಟ್‌ನಲ್ಲಿ, 'ಗಾಂಧಿಯವರ ಮನೆ ಎಲ್ಲಿದೆ' ಎಂದು ದಾರಿಯಲ್ಲಿ ಎಡತಾಕಿದವರನ್ನು ಕೇಳಿದಾಗ ದೊರೆತ ಉತ್ತರ – 'ಮಾಲೂಮ್ ನಹೀ'. ಆಗ ಸಹಾಯಕ್ಕೆ ಬಂದದ್ದು ವಿದೇಶಿ ಗೂಗಲ್! ಯಂತ್ರಗಳನ್ನು ವಿರೋಧಿಸಿದ ಮಹಾತ್ಮನ ಮನೆಯನ್ನು ಪತ್ತೆ ಹಚ್ಚಲಿಕ್ಕೆ ಯಂತ್ರವೇ ನೆರವಾಗಬೇಕಾಯಿತು.**



ಪೋರಬಂದರ್‌ನಲ್ಲಿನ ಗಾಂಧಿ ಜನ್ಮಸ್ಥಳ


ರಾಜ್‌ಕೋಟ್‌ನಲ್ಲಿನ ಗಾಂಧಿ ನಿವಾಸ


ಗಾಂಧಿವಾದಿ ನರೋತ್ತಮ ಪಲೋನ್ ಅವರೊಂದಿಗೆ ಲೇಖಕ, ನಿರ್ದೇಶಕ ಪಿ. ಶೇಷಾದ್ರಿ

ಮಗನ ಪ್ರಾಯಶ್ಚಿತ್ತ ಪತ್ರವನ್ನು ಹರಿದು ಚೂರು ಮಾಡಿದರು. ಮಗನನ್ನು ಬರಸೆಳೆದು ಅಪ್ಪಿಕೊಂಡು ಸಂತೈಸಿದರು. ಅಪ್ಪನ ಈ ಪ್ರತಿಕ್ರಿಯೆ ಮೋಹನದಾಸನ ಮೇಲೆ ವಿಶೇಷ ಪರಿಣಾಮ ಬೀರಿತು. ಹಾಗಾಗಿ ಈ ಕಥನ ಬರಿಯ ಮಕ್ಕಳಿಗಷ್ಟೇ ಅಲ್ಲ, ಪೋಷಕರಿಗೂ ಬೋಧಪ್ರದವಾದ ಅಂಶಗಳನ್ನು ಹೊಂದಿದೆ ಅನ್ನಿಸಿತು.

ನಾನು ಈ ಚಿತ್ರದ ಚಿತ್ರಕಥೆ ಬರೆಯುತ್ತಿರುವ ಹೊತ್ತಿನಲ್ಲಿ ನನ್ನ ಮಗ ಯಾವುದೋ ತಪ್ಪು ಮಾಡಿ ಸಿಕ್ಕಿಹಾಕಿಕೊಂಡ. ಅದು ಕೌಮಾರ್ಯದಲ್ಲಿ ಯಾವುದೇ ಹುಡುಗ ಮಾಡುವ ತಪ್ಪು. ಸಹಜವಾಗಿ ನನಗೆ ಕೋಪ ಬಂದಿತ್ತು. ಅವನಿಗೆ ಹೇಗೆ ತಿಳಿವಳಿಕೆ ಹೇಳುವುದು ಎಂದು ಚಿಂತಿಸಿದೆ. ಕರಮಚಂದರ ತಂತ್ರವನ್ನೇ ಬಳಸಿದರೆ ಹೇಗೆ ಎನ್ನಿಸಿತು. ನನ್ನ ತಂದೆ ಅದನ್ನೇ ಬಾಲ್ಯದಲ್ಲಿ ನನ್ನ ಮೇಲೆ ಪ್ರಯೋಗಿಸಿದ್ದರು. ನಾನೂ ಅದನ್ನೇ ಬಳಸಿದೆ. ನನ್ನ ಆ ಪ್ರತಿಕ್ರಿಯೆ ಅವನಿಗೆ ಆಶ್ಚರ್ಯ ತಂದಿದೆ ಎಂಬುದು ಅವನ ಮುಖಭಾವದಿಂದ ತಿಳಿಯುತ್ತಿತ್ತು. ಆನಂತರ ಅವನು ನಾನು ಕೋಪದಿಂದ ಛೀಮಾರಿ ಹಾಕಿದ್ದರೆ ಪಡುವ ಯಾತನೆಗಿಂತ ಹೆಚ್ಚಿನ ಯಾತನೆ ಪಟ್ಟದ್ದು ನನ್ನ ಅರಿವಿಗೆ ಬಂದಿತ್ತು.

'ಮೋಹನದಾಸ' ಚಿತ್ರ ತಯಾರಿಸೋ ಹಂಬಲ ಬಲವಾಯಿತು.

ಇಂದೇನಾಗಿದೆ ಎಂದು ನಿಮಗೇ ಗೊತ್ತಿದೆ? ಗಾಂಧಿಯ ಆದರ್ಶಗಳು ಅಪ್ರಸ್ತುತ ಅನ್ನುವ ಚರ್ಚೆ ಎದ್ದಿದೆ. ಗಾಂಧಿಯನ್ನು ದ್ವೇಷಿಸುವ ಒಂದು ವರ್ಗವೇ ಇದೆ. ಯಾವುದನ್ನು ನಂಬಬೇಕು ಯಾವುದನ್ನು ಬಿಡಬೇಕು ಎಂಬ ಗೊಂದಲದಲ್ಲಿ ಸಾಮಾನ್ಯನಿದ್ದಾನೆ.

ಈವತ್ತಿನ ಬಹುತೇಕ ಮಕ್ಕಳಿಗೆ ಗಾಂಧಿ ಎಂದರೆ ಅಕ್ಟೋಬರ್ ಎರಡರಂದು ಬರುವ 'ಗಾಂಧಿಜಯಂತಿ', ಮತ್ತೊಂದು ರಜಾ ದಿನ! ಹರೆಯದವರಿಗೆ ಮೋಜಿನ ಎಂ.ಜಿ.ರೋಡ್! ದೊಡ್ಡವರಿಗೆ ಕರೆನ್ಸಿ ನೋಟಿನ ಮೇಲಿನ ಚಿತ್ರ! ನೋಟಿನ ಮೇಲಿನ ಚಿತ್ರ ಎಂದಾಗ ನನಗೆ ಇನ್ನೊಂದು ಘಟನೆ ನೆನಪಾಗುತ್ತಿದೆ.

ಕೆಲವು ವರ್ಷಗಳ ಹಿಂದೆ ಚಲನಚಿತ್ರೋತ್ಸವವೊಂದರಲ್ಲಿ ಭಾಗವಹಿಸಲು ಈಜಿಪ್ಟ್ ದೇಶದ ಕೈರೋ ನಗರಕ್ಕೆ ಹೋಗಿದ್ದೆ. ಅಲ್ಲಿ ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭ. ಟ್ಯಾಕ್ಸಿಯವನೊಂದಿಗೆ ಸಂಭಾಷಣೆಗೆ ನಿಂತೆ. ಅವನು 'ನೀವು ಯಾವ ದೇಶದವರು' ಎಂದು ಕೇಳಿದ. ನಾನು 'ಇಂಡಿಯಾ' ಎಂದೆ. ಅವನು, 'ನನಗೂ ಇಂಡಿಯಾದವರು ಚೆನ್ನಾಗಿ ಗೊತ್ತು' ಎಂದ. 'ಯಾರ್‍ಯಾರು ಗೊತ್ತು ಹೇಳು' ಎಂದೆ. ಅವನು, 'ಅಮಿತಾಭ್ ಬಚ್ಚನ್, ಶಾರೂಕ್ ಖಾನ್... ಬಾಲಿವುಡ್ ಸಿನಿಮಾ... ಡ್ಯಾನ್ಸ್!' ಎಂದು ಮೈ ಕುಣಿಸಿ ಆಕ್ಷನ್ ಕೂಡ ಮಾಡಿ ತೋರಿಸಿಬಿಟ್ಟ. ನಾನು, 'ಭಾರತದಲ್ಲಿ ಅವರಷ್ಟೇ ಅಲ್ಲ ಇರೋದು, ತುಂಬ ಖ್ಯಾತನಾಮರು ಇದ್ದಾರೆ, ಉದಾಹರಣೆಗೆ ನೋಡು', ಎಂದು ನನ್ನ ಜೇಬಿನಲ್ಲಿದ್ದ ಕರೆನ್ಸಿ ನೋಟ್‌ನಲ್ಲಿದ್ದ ಗಾಂಧೀಜಿಯ ಚಿತ್ರ ತೋರಿಸಿ – 'ಇವರು ಗೊತ್ತಿರಲೇಬೇಕಲ್ಲವೇ ನಿನಗೆ' ಎಂದೆ. ಅವನು ನನ್ನತ್ತ ತಿರುಗಿ 'ಗೊತ್ತಿಲ್ಲ' ಎಂದ. 'ಇವರನ್ನು ಯಾರೆಂದು ತಿಳಿದಿದ್ದೀ? ಮಹಾತ್ಮ, ಇಡೀ ಜಗತ್ತಿಗೇ ಗೊತ್ತು. ನಿಮ್ಮೂರಿನ ಪಿರಮಿಡ್‌ನಷ್ಟೇ ಇವರೂ ಜಗದ್ವಿಖ್ಯಾತರು' ಎಂದೆ.